ಚಾರಿ ಕಟ್ಟಡಕ್ಕೆ ನಮ್ಮ ಷೆಡ್ಯೂಲಿನಲ್ಲಿ ದರಗಳಿಲ್ಲ ಎಂದು ಹೇಳಿದ್ದೀರಿ. ಆ ಕೆಲಸಗಳಿಗೆಲ್ಲಾ ತಾವೀಗ ಯಾವ ರೆಕ್ಕಾಚಾರದ ಪ್ರಕಾರ ದುಡ್ಡನ್ನು ಕೊಟ್ಟಿದ್ದೀರಿ ?

ಶ್ರೀ ಕೆ. ಹನುಮಂತಯ್ಯ.—ಈ ಬಗ್ಗೆ ನಾನೀಗ ತಮಗೆ ಇಷ್ಟು ಮಾತ್ರ ಹೇಳುತ್ತೇನೆ—ತಾವೀಗ ಆ ಎಸ್ಟಿಮೇಟ್ ಸಮಿತಿಯಲ್ಲಿ ಒಬ್ಬ ಸದಸ್ಯರಾಗಿರುತ್ತೀರಿ. ಹೋದವರ್ಷ ತಾವು ಆ ಕೆಲಸಗಳನ್ನೆಲ್ಲಾ ಪರಿಶೀಲನೆ ನಡೆಸಿ ನೋಡಿದ್ದೀರಿ. ಈ ವರ್ಷ ಅಂಥ ಪರಿಶೀಲನೆ ನಡೆಸುವುದಕ್ಕೆ ಅವಕಾಶವಿಲ್ಲದಿದ್ದರೂ ತಾವು ಈಗಲೂ ಸಹ ಅಲ್ಲಿಗೆ ಹೋಗಿ ಅಲ್ಲಿಯ ಪ್ರತಿಯೊಂದು ಐಟಂ ಕೆಲಸವನ್ನೂ ಪರಿಶೀಲನೆ ನಡೆಸಬಹುದು. ಅದರಲ್ಲಿ ಏನಾದರೂ ಅಂಥ ಅಕ್ರಮಗಳಿದ್ದರೆ ಅವುಗಳನ್ನು ತಾವು ಈ ಸಭೆಯ ಗಮನಕ್ಕೆ ತರಬಹುದು.

ಶ್ರೀ ಎಸ್. ಸಿ. ನಾಗಯ್ಯರೆಡ್ಡಿ.—ನನಗೆ ಅನೇಕ ವಿಚಾರಗಳು ಬಂದಿವೆ. ಅವುಗಳ ಬಗ್ಗೆ ನಾನೀಗ ಅಂಕಿ ಅಂಶಗಳನ್ನೆಲ್ಲಾ ಕೇಳಲು ಹೊರಟರೆ ಅದು ಸರಿಯೋ—ಸರಿಯೆಲ್ಲವೋ ಎಂದು ಯೋಚನೆ . . . .

Sri K. HANUMANTHAIYA.—I cannot find a better Chairman of the Enquiry Committee than yourself.

ಆದುದರಿಂದ ನಿಮ್ಮ ಅಧ್ಯಕ್ಷತೆಯಲ್ಲಿರುವ ಆ ಎಸ್ಟಿಮೇಟ್ ಸಮಿತಿಯೇ ಆ ಕೆಲಸ ಮಾಡಲಿ.

Accommodation for the Minister for Industries at Bangalore.

Q.—210. Sri S. SRINIVASA IYENGAR (T.-Narasipur).—

Will the Government be pleased to state :—

the amount of money spent during this year for the residence at Bangalore of Sri Channabasappa, the Hon'ble Minister for Industries

(*i*) for repairs and works,

(*ii*) for furnishing and cutlery ?

A.—Sri K. HANUMANTHAIYA (Chief Minister).—

(i) Nil.

(ii) Rs. 6,767-10-6.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ನನ್ನ ಪ್ರಶ್ನೆಗೆ ಉತ್ತರವಾಗಿ 6,767-10-6ರೂಪಾಯಿಗಳು ಖರ್ಚಾಗಿದೆ ಎಂದು ತಿಳಿಸೋಣವಾಗಿದೆ. ಈ ಮೊಬಲಗು ಯಾವ ಯಾವ ಸಾಮಾನುಗಳಿಗಾಗಿ ಖರ್ಚಾಯಿತು ಎನ್ನುವುದನ್ನು ತಿಳಿಸುತ್ತೀರಾ ?

ಶ್ರೀ ಕೆ. ಹನುಮಂತಯ್ಯ.—ತಾವು ನೋಟೀಸ್ ಕೊಟ್ಟರೆ ತಿಳಿಸುತ್ತೇನೆ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಈಗ ತಾವು ಈ ಮಾನ್ಯ ಮಂತ್ರಿಗಳಿಗೆ ರಿಪೇರಿ ಮಾಡಿಸಿ ಕೊಟ್ಟಿರತಕ್ಕ ಕಟ್ಟಡ ಸರ್ಕಾರದ್ದೋ ಅಥವಾ ಸಾರ್ವಜನಿಕರದೋ ?

ಶ್ರೀ ಕೆ. ಹನುಮಂತಯ್ಯ.—ಸಾರ್ವಜನಿಕರದು. ಸರ್ಕಾರದ ಕಟ್ಟಡ ಯಾವುದೂ ಇರಲಿಲ್ಲವಾದ್ದರಿಂದ ಖಾಸಗಿಯವರ ಕಟ್ಟಡವನ್ನು ತೆಗೆದುಕೊಳ್ಳಲಾಗಿದೆ.

New Car for Chief Minister.

Q.—214. Sri S. SRINIVASA IYENGAR (T.-Narasipur).—

Will the Government be pleased to state :—

(*a*) whether a new car was purchased recently for the use of the Hon'ble Chief Minister ;

(*b*) the amenities provided inside the car ;

(*c*) the fittings attached to distinguish the car from others ?

A.—Sri K. HANUMANTHAIYA (Chief Minister).—

(*a*) Yes.

(*b*) The rear cloth screen, Khadi seat covers and radio are provided inside the car.

(*c*) A green light.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಮಾನ್ಯ ಮುಖ್ಯ ಮಂತ್ರಿಗಳು ಈ ಹೊಸ ಕಾರನ್ನು ಕೊಂಡಿದ್ದು ಯಾವಾಗ ?

ಶ್ರೀ ಕೆ. ಹನುಮಂತಯ್ಯ.—4-5 ತಿಂಗಳಾಗಿರಬಹುದು. ಆ ತಾರೀಖು ನನಗೆ ಗೊತ್ತಿಲ್ಲ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಬೆಲೆಯೇನು ?

ಶ್ರೀ ಕೆ. ಹನುಮಂತಯ್ಯ.—ಅದರ ಬೆಲೆ ವಿಚಾರ ನನಗೆ ಗೊತ್ತಿಲ್ಲ. ನಾನೇನೂ ಅದನ್ನು ಕೊಂಡು ಕೊಂಡೂ ಇಲ್ಲ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಹಾಗಾದರೆ ಆ ಕಾರನ್ನು ಯಾರು ಕೊಂಡಿರುತ್ತಾರೆ ?

ಶ್ರೀ ಕೆ. ಹನುಮಂತಯ್ಯ.—ಸರ್ಕಾರದವರು. The concerned departmental officer has paid for it. I do not know what the price of the car is.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಹಾಗಾದರೆ ಬಡ್ಜೆಟ್ಟಿನಲ್ಲಿ ಇದನ್ನು ತಾವು ರೆಫರ್ ಮಾಡುವುದಿಲ್ಲವೆ ?

ಶ್ರೀ ಕೆ. ಹನುಮಂತಯ್ಯ.—ಆ ಹೆಡ್ಡಿನಲ್ಲೇ ಆ ಕಾರನ್ನು ಕೊಂಡಿರುವುದು. ಆದುದರಿಂದ ಅದು ಆ ಬಡ್ಜೆಟ್ ಪ್ರಾವಿಜ್‌ನಲ್ಲಿ ಇದ್ದೇ ಇರುತ್ತದೆ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ತಾವು ಈ ಹಿಂದೆ ಒಂದು ಕಾರನ್ನು ಕೊಂಡುಕೊಂಡಿರಲಿಲ್ಲವೇ ?

ಶ್ರೀ ಕೆ. ಹನುಮಂತಯ್ಯ.—ಕೊಂಡಿತ್ತು. ಆ ಗಾಡಿ 50 ಸಾವಿರ ಮೈಲಿಗಳ ಮೇಲೆ ಓಡಿತ್ತಾದ ಕಾರಣ ಈಗ ಬೇರೆ ಕಾರನ್ನು ಕೊಂಡುಕೊಳ್ಳಲಾಯಿತು.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಈಗ ತಾವು ಕೊಂಡಿರುವ ಹೊಸ ಕಾರಿನಲ್ಲೂ ಎಲ್ಲಾ ಸೌಕರ್ಯಗಳಿರುತ್ತವೆಯೇ ?

ಶ್ರೀ ಕೆ. ಹನುಮಂತಯ್ಯ.—ಏನೂ ಇಲ್ಲ.